ಡಕಾಯಿತರ ಹಾವಳಿ ತಪ್ಪಿಸುವ ಬಗ್ಗೆ

೧೪೮೬ (೨೨೫೯) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ):- ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ-ಗುಡಗಲ್ ರಸ್ತೆಯ ಮೇಲೆ ಮಲಖೇಡ ಸೇಡಂ ಮಧ್ಯದಲ್ಲಿ ಆನೇ ನಂಬರ್ ಗೇಟ್ ಸಮೀಪ ದರೋಡೆಕೋರರು ದರೋಡೆ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ದರೋಡೆಕೋರರು ತೆಲುಗು ಭಾಷೆ ಆಡುವವರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಗಮನಿಸಿದರೆ ಆಂಧ್ರ ಪ್ರದೇಶದಲ್ಲಿರುವ ನಕ್ಸಲೈಟ್‌ಗಳೆಂಬ ಭಾವನೆ ಉಂಟಾಗುವುದಿಲ್ಲವೆ?

ಇ) ಇದನ್ನು ತಡೆಗಟ್ಟಲು ಸುತ್ತಮುತ್ತಲೂ ಸಿಮೆಂಟ್ ಕಾರ್ಖಾನೆಗಳು ಇರುವ ಮಲಖೇಡ ಹಾಗೂ ಗಡಿ ಪ್ರಾಂತ್ಯದಲ್ಲಿ ಬರುವ ಹೈದ್ರಾಬಾದ್-ಬಿಜಾಪುರ ರಸ್ತೆ ಮಧ್ಯದಲ್ಲಿರುವ ಮೇದಕೆ ಸರಹದ್ದಿನಲ್ಲಿ ಪೋಲೀಸ್ ಠಾಣೆಗಳ ವ್ಯವಸ್ಥೆ ಮಾಡಿ, ಈ ಹಾವಳಿಯನ್ನು ತಪ್ಪಿಸಬಹುದಲ್ಲವೆ?.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು):-

ಅ) ಹೌದು, ಬಂದಿದೆ. ಈ ದರೋಡೆಯು ದಿನಾಂಕ ೩ ಮತ್ತು ೪ನೇ ಮಾರ್ಚಿ ೧೯೯೨ರಂದು ರಾತ್ರಿ ನಡೆದಿದೆ.

ಆ) ಸಾಕ್ಷಿಗಳ ಹೇಳಿಕೆಗನುಸಾರ, ದರೋಡೆಕೋರರು ತೆಲುಗು, ಹಿಂದಿ ಮತ್ತು ಲಂಬಾಣಿ ಭಾಷೆಗಳನ್ನು ಮಾತನಾಡುತ್ತಿದ್ದರೆಂದು ತಿಳಿದು ಬಂದಿದೆ. ಹಾಗೂ ಇವರು ವೃತ್ತಿಪರ ದರೋಡೆಕೋರರು ಎಂದು ತನಿಖೆಯಿಂದ ತಿಳಿದು ಬಂದಿದೆ ಆದರೆ ಇವರು ಆಂಧ್ರ ಪ್ರದೇಶದ ನಕ್ಸಲೈಟ್‌ಗಳಲ್ಲ.

ಇ) ಪರಿಸ್ಥಿತಿ ಹಾಗೂ ಆವಶ್ಯಕತೆಯನ್ನು ನೋಡಿಕೊಂಡು ಈ ಬಗ್ಗೆ ಪರಿಶೀಲಿಸಲಾಗುವುದು. ಗುಲ್ಬರ್ಗಾ ಕೇಂದ್ರ ಸ್ಥಾನವಾಗಿದ್ದು, ಒಬ್ಬ ಅಡಿಷನಲ್ ಎಸ್. ಪಿ. ಯವರ ಚಾರ್ಜ್‌ನಲ್ಲಿ ಒಂದು ದರೋಡೆ ನಿರೋಧಕ ದಳವನ್ನು ಸೃಷ್ಟಿಸಿ ಈಗಾಗಲೇ ಆದೇಶ ಹೊರಡಿಸಲಾಗಿದೆ.

ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ಹೆಚ್ಚಾಗುತ್ತಿರುವ ಬಗ್ಗೆ

೧೪೯೩ (೨೨೭೬) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವೆರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ದಿನೇ ದಿನೇ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಹಾವಳಿಯಿಂದ ಕೂಲಿಕಾರರು ಶ್ರಮಿತ ವರ್ಗಗಳು ತೊಂದರೆ ಅನುಭವಿಸುತ್ತಿರುವುದು ನಿಜವಲ್ಲವೇ?

ಇ) ಈ ಮಟ್ಕಾ ಹಾವಳಿಯನ್ನು ಕೂಡಲೇ ತಡೆಗಟ್ಟಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):-

ಆ) ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ಹೆಚ್ಚಾಗಿರುವುದು ಕಂಡು ಬಂದಿರುವುದಿಲ್ಲ.

ಆ) ಈ ಬಗ್ಗೆ ಪೋಲೀಸ್ ಇಲಾಖೆಗೆ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಇ) ಈ ಮಟ್ಕಾ ಹಾವಳಿಯು ಹೆಚ್ಚಾಗಿಲ್ಲದಿದ್ದರೂ ಸಹ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದು, ಈ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ ಸಮಯಕ್ಕೆ ಸರಿಯಾಗಿ ದಾಳಿ ಮಾಡಿ ಅಂಥವರ ಮೇಲೆ ಕ್ರಮ ತೆಗದುಕೊಂಡಿದೆ.

ಉಪಾಧ್ಯಕ್ಷಣಿಯವರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರೈತರ ಸಾಲ ಮನ್ನಾ ಮಾಡುವುದು

ಶ್ರೀ ಕೆ. ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ನಮ್ಮ ಕರ್ನಾಟಕದ ಮುಖ್ಯ ಮಂತ್ರಿಗಳನ್ನು ಆತ್ಮೀಯತೆಯಿಂದ ಆಹ್ವಾನ ಮಾಡುವುದಕ್ಕೋಸ್ಕರ ಭಾರತೀಯ ಜನತಾ ಪಕ್ಷದವರು ಈವತ್ತು ಇಲ್ಲಿಗೆ ಬಂದ್ದಿದ್ದಾರೆ. ಏತಕ್ಕೆಂದರೆ ವಿಧಾನ ಸಭೆಯಲ್ಲಿ ಈ ರಾಜ್ಯದ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸಾಕಷ್ಟು ಚರ್ಚೆ ಮಾಡಿದೆವು. ಹಿಂದೆ ಬಡ್ಜೆಟ್‌ನಲ್ಲಿ ಕೂಡ ಈ ಬಗ್ಗೆ ಒಪ್ಪಿಕೊಂಡಿದ್ದರು. ಈ ಸಾರಿ ಬಡ್ಜೆಟ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪವೇ ಬಂದಿಲ್ಲ. ಶ್ರೀ ಮೋರೆಯವರು ಹೇಳುತ್ತಿದ್ದಾರೆ, ಇದು ಮುಗಿದುಹೋದ ವಿಷಯ ಎಂದು. ಕೃಷ್ಣ ಕಾವೇರಿ ಬಗ್ಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿವರ್ಷ ತೆಗೆದಿಡಿ ಎಂದು ಹೇಳುತ್ತಿದ್ದೇವೆ. ಅದರ ಬಗ್ಗೆ ಕೂಡ ಸರ್ಕಾರ ಗಮನ ಕೊಡಲಿಲ್ಲ. ಈ ರಾಜ್ಯದ ನಿರುದ್ಯೋಗಿ ಯುವಕರ ಬಗ್ಗೆ ಒಂದು ಉದ್ಯೋಗದ ನಿರ್ಬಂಧವನ್ನು ತೆಗೆಯಬೇಕೆಂದು ಕೇಳುತ್ತಿದ್ದೇವೆ, ಅದರ ಬಗ್ಗೆಯೂ ಗಮನ ಕೊಡುತ್ತಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು:- ನೀವು ಯಾವುದರ ಬಗ್ಗೆ ಮಾತನಾಡುತ್ತಿದ್ದೀರಿ ಎಂದು ಗೊತ್ತಾಗುತ್ತಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ:- ಬಡ್ಜೆಟ್‌ನಲ್ಲಿ ಎಂಟ್ರಿ ಟ್ಯಾಕ್ಸ್ ಜಾಸ್ತಿ ಹಾಕಿರುವುದರಿಂದ ದಿನಬಳಕೆ ವಸ್ತುಗಳ ಬೆಲೆ ಜಾಸ್ತಿ ಆಗಿದೆ. ಇಲ್ಲಿ ನಮಗೆ ಕೂಗಿಕೂಗಿ ಸಾಕಾಗಿದೆ. ನಮ್ಮ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ನಾಳೆ ನಮ್ಮ ರಾಜ್ಯದ ೫ ಲಕ್ಷ ಜನರ ರೈತರ ಜಾಥಾ ತರುತ್ತಿದ್ದಾರೆ, ಅವರಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಆಹ್ವಾನ ಕೊಡುವುದಕ್ಕೆ ನಾವು ಸಭೆಗೆ ಬಂದಿದ್ದೇವೆ. ನಾವು ಎಷ್ಟು ಕೂಗಿದರೂ ಸರ್ಕಾರಕ್ಕೆ ಅರ್ಥವಾಗಿಲ್ಲ. ನಾಳೆ ೫ ಲಕ್ಷ ಜನರು ಬರುತ್ತಿದ್ದಾರೆ, ವಿಧಾನ ಸೌಧಕ್ಕೆ ಮುತ್ತಿಗೆ ಹಾಕುತ್ತಿದ್ದಾರೆ. ಮುಖ್ಯ ಮಂತ್ರಿಗಳು ನಾವು ಕೇಳಿದ ಪ್ರಶ್ನೆಗಳಿಗೆ ವಿಧಾನ ಸಭೆಯಲ್ಲಿ ಉತ್ತರ ಕೊಡಲಿಲ್ಲ.

ಉಪಾಧ್ಯಕ್ಷಣಿಯವರು:- ಆಯಿತು, ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.